ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1445 (1740
2. ಮಾನ್ಯ ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೊಜಾ
3. ಉತ್ತರಿಸಬೇಕಾದ ದಿನಾಂಕ : 23.03.2020
4. ಉತ್ತರಿಸಬೇಕಾದ ಸಚಿವರು : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
ಅ)	BDS ಮತ್ತು BAMS ಕೋರ್ಸು ಮಾಡಿದ ವಿದ್ಯಾರ್ಥಿಗಳು MBBS ಗೆ ಪ್ರವೇಶ ಪಡೆಯಲು ಅನುಮತಿ ನೀಡಲಾಗುತ್ತಿದೆ ಎಂಬ ನಿಯಮವೇನಾದರೂ ಇಲಾಖೆಯ ಮುಂದಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು)	BDS ಮತ್ತು BAMS ಕೋರ್ಸು ಮಾಡಿದ ವಿದ್ಯಾರ್ಥಿಗಳು MBBS ಗೆ ಪ್ರವೇಶಾತಿ ಹೊಂದಲು ಯಾವುದೇ ನಿಯಮಾವಳಿಗಳು ಇರುವುದಿಲ್ಲ ಹಾಗೂ ಈ ರೀತಿ ಪ್ರವೇಶಾತಿ ಹೊಂದಲು ನಿಯಮಗಳನ್ನು ರೂಪಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.
ಆ)	ರಾಜ್ಯದಲ್ಲಿ BDS ಸೀಟುಗಳು ಖಾಲಿ ಇವೆ ಎಂಬ ವರದಿಗಳಿರುವುದು ನಿಜವೇ; ಕಾರಣಗಳೇನು; ಈ ಬಗ್ಗೆ ಇಲಾಖೆ ಮುಂದಿರುವ ಕ್ರಮವೇನು;	ಹೌದು. ನೀಟ್ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ವಿದ್ಯಾರ್ಥಿಗಳು ಎಂಬಿಬಿಎಸ್ ಸೀಟಿಗೆ ಮೊದಲ ಆದ್ಯತೆ ನೀಡಲಿದ್ದು, ಎಂಬಿಬಿಎಸ್ ಸೀಟು ಸಿಗದ ವಿದ್ಯಾರ್ಥಿಗಳು BDS ಆಯ್ಕೆ ಮಾಡಿಕೊಳ್ಳುತ್ತಿದ್ದರು. ಪ್ರಸ್ತುತ ಈ ತರಹದ ವಿದ್ಯಾರ್ಥಿಗಳು BAMS ಹಾಗೂ ಇತರೆ ಕೋರ್ಸುಗಳಿಗೆ ಪ್ರವೇಶಾತಿ ಹೊಂದಲು ಆಸಕ್ತಿ ತೋರಿಸುತ್ತಿರುವುದರಿಂದ, BDS ಸೀಟುಗಳು ಖಾಲಿ ಉಳಿಯುತ್ತಿವೆ.
ಇ)	ರಾಜ್ಯದಲ್ಲಿ BDS ಕಾಲೇಜುಗಳಲ್ಲಿ ಮೂಲ ಸೌಲಭ್ಯಗಳ ಕೊರತೆ ಇದೆಯೇ; (ವಿವರ ನೀಡುವುದು)	ರಾಜ್ಯದಲ್ಲಿ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಮತ್ತು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬಳ್ಳಾರಿ ಹೀಗೆ ಎರಡು ಸ್ವಾಯತ್ತ ಸರ್ಕಾರಿ ದಂತ ಕಾಲೇಜುಗಳಿದ್ದು, ಸದರಿ ಕಾಲೇಜುಗಳಲ್ಲಿ ಮೂಲ ಸೌಲಭ್ಯಗಳ ಕೊರತೆ ಇರುವುದಿಲ್ಲ. ಭಾರತೀಯ ದಂತ ಪರಿಷತ್ತಿನ ನಿಯಮಾವಳಿಯನ್ವಯ ಕಾಲಕಾಲಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
ಈ)	2018-19 ಮತ್ತು 2019-20 ರಲ್ಲಿ ಎಂಬಿಬಿಎಸ್ ಕಾಲೇಜು ಮತ್ತು ಬಿಡಿಎಸ್ ಕಾಲೇಜುಗಳ ಸ್ಥಾಪನೆಗೆ ಇಲಾಖೆಯ ಮುಂದೆ ಎಷ್ಟು ಅರ್ಜಿಗಳು ಬಂದಿರುತ್ತದೆ? (ವಿವರ ನೀಡುವುದು)	2018-19 ಮತ್ತು 2019-20 ರಲ್ಲಿ ಎಂಬಿಬಿಎಸ್ ಮತ್ತು ಬಿಡಿಎಸ್ ಕಾಲೇಜುಗಳ ಸ್ಥಾಪನೆಗೆ ಇಲಾಖೆಯ ಮುಂದೆ ಯಾವುದೇ ಅರ್ಜಿಗಳು ಬಂದಿರುವುದಿಲ್ಲ.

ಎಂಇಡಿ 66 ಎಂಪಿಎಸ್ 2020

(ಡಾ:ಕೆ.ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು